**ಪತ್ರಿಕಾ ಪ್ರಕಟಣೆ**

ಯಾದಗಿರಿ
ದಿನಾಂಕ;11/05/2021

## ಅನಧಿಕೃತವಾಗಿ ಮಾರಾಟ ಮಾಡುತ್ತಿದ್ದ ರೆಮಡಿಸಿವರ್ ಚುಚ್ಚುಮದ್ದು ವಶಪಡಿಸಿಕೊಂಡ ಬಗ್ಗೆ.

*****

ದಿನಾಂಕ;11/05/2021 ರಂದು ಕೋವಿಡ್-19 ರೋಗಿಗೆ ನೀಡುವ ರೆಮಡಿಸಿವರ್ ಎಂಬುವ ಚುಚ್ಚುಮದ್ದು ಔಷಧಿಯನ್ನು ಅಪ್ರಮಾಣಿಕವಾಗಿ, ಪಡೆದುಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವ ಬಗ್ಗೆ ಯಾದಗಿರಿ ಠಾಣೆ ಗುನ್ನೆ ನಂ.55/2021 ಕಲಂ.420 ಐಪಿಸಿ, ಕಲಂ.18(ಸಿ) **Drugs & Cosmetics Act-1940, The Drugs (Prices Control) Order-2013 U/s 7 of EC Act** ರೀತ್ಯಾ ಪ್ರಕರಣ ದಾಖಲಿಸಿ ತನಿಖೇ ಕೈಗೊಂಡಿರುತ್ತದೆ.

ರೆಮಡಿಸಿವರ್ ಔಷಧಿಯನ್ನು ಅತಿಅವಶ್ಯಕ ಔಷಧಿ ಅಂತಾ ಪರಿಗಣಿಸಿದ್ದು ಅದನ್ನು ಹೆಚ್ಚಿನ ಬೆಲೆಗೆ ಕಾಳ ಸಂತೆಯಲ್ಲಿ ಮಾರಾಟ ಮಾಡಿ ಹಣ ಗಳಿಸಲು, ಕೋವಿಡ್-19 ರೋಗಿಗಳಿಗೆ ಹಾಗೂ ಅವರ ಕುಟುಂಬದವರಿಗೆ ವಂಚಿಸುವ ಉದ್ದೇಶದಿಂದ ಹೆಚ್ಚಿನ ಬೆಲೆಗೆ ಮಾರಾಟ ಮಾಡುವಾಗ ದಾಳಿ ಮಾಡಿ ಆರೋಪಿತರಾದ

1) ಚಿರಂಜೀವಿ ತಂದೆ ಶರಣಪ್ಪ ಎಡವಲ್ಲಿ ವಯ: 25
2) ಮಲ್ಲು ತಂದೆ ಪೀರಪ್ಪ ಬುಡಗಜಂಗಮ ವಯ: 21
3) ರವಿಕುಮಾರ ತಂದೆ ದುರ್ಗಪ್ಪ ಸೀತನೂರ ವಯ: 22

ಎಲ್ಲರೂ ಸಾ; ಯಾದಗಿರಿ ರವರನ್ನು ದಸ್ತಗಿರಿ ಮಾಡಿ, ಇವರಿಂದ ಉಪಯೋಗಿಸದ ಎರಡು ರೆಮಡಿಸಿವರ್ ಚುಚ್ಚು ಮದ್ದು ಬಾಟಲಿಗಳನ್ನು, ಒಂದು ಮೋಟರ ಸೈಕಲ್ ಮತ್ತು ಮೂರು ಮೊಬೈಲಗಳನ್ನು ವಶಪಡಿಸಿಕೊಂಡಿರುತ್ತದೆ.

ಸದರಿ ದಾಳಿಯಲ್ಲಿ ಭಾಗವಹಿಸಿದ ಶ್ರೀ ಸುನೀಲ ವ್ಹಿ ಮೂಲಿಮನಿ ಪಿ.ಐ ಸಿ.ಇ.ಎನ್ ಪೊಲೀಸ ಠಾಣೆ, ಶ್ರೀ ವಿಜಯಕುಮಾರ ಪಿ.ಎಸ್.ಐ ಸಿ.ಇ.ಎನ್ ಪೊಲೀಸ ಠಾಣೆ, ಶ್ರೀ ಸೈಯದ ಅಲಿ ಹೆಚ್.ಸಿ-191, ಶ್ರೀ ಗುಂಡಪ್ಪ ಹೆಚ್.ಸಿ-115, ಶ್ರೀ ಈರಣ್ಣ ಹೆಚ್.ಸಿ-144, ಶ್ರೀ ಶ್ರೀಮಂತ ಸಿಂಧೆ ಹೆಚ್.ಸಿ-141, ಶ್ರೀ ಸಾಯಬಣ್ಣ ಪಿ.ಸಿ-145 ರವರ ಕರ್ತವ್ಯವನ್ನು ಮಾನ್ಯ ಜಿಲ್ಲಾ ಪೊಲೀಸ ಅಧಿಕ್ಷಕರು ಯಾದಗಿರಿ ರವರು ಶ್ಲಾಂಘಿಸಿರುತ್ತಾರೆ.

ಪೊಲೀಸ ಅಧಿಕ್ಷಕರು
ಯಾದಗಿರಿ ಜಿಲ್ಲೆ

